# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 28/1/2020

# ಎಸ್. ಮೂರ್ತಿ ಅಮಾನತು ವರ್ಷ ಕಳೆದರೂ ನಿಯೋಜನೆ ಇಲ್ಲ

28/1/20

■ **ವಿಕ ಸುದ್ದಿಲೋಕ** ಬೆಂಗಳೂರು



ಕರ್ತವ್ಯಲೋಪ ಹಾಗೂ ಅವ್ಯವಹಾರದ ಆರೋಪದ ಮೇಲೆ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಅವಧಿಯಲ್ಲಿ ಅಮಾನತು ಗೊಂಡಿದ್ದ ವಿಧಾನಸಭೆ ಕಾರ್ಯದರ್ಶಿ ಎಸ್.ಮೂರ್ತಿ ಅಮಾನತುಗೊಂಡು ವರ್ಷ ಕಳೆದರೂ ಅವರನ್ನು ಮತ್ತೆ ಮರು ನಿಯೋಜನೆ ಮಾಡದೇ ಇರುವ ವಿಚಾರ ಈಗ ಚರ್ಚೆಗೆ ಕಾರಣವಾಗಿದೆ.

ಸ್ಪೀಕರ್ ಆದೇಶ ಪ್ರಶ್ನಿಸಿದ್ದ ಮೂರ್ತಿಗೆ ನ್ಯಾಯಾಲಯದಲ್ಲಿ ಕೊಂಚಮಟ್ಟಿಗಿನ ಸಮಾಧಾನ ಲಭ್ಯವಾಗಿದೆ. ಸ್ಪೀಕರ್ ಆದೇಶದ ಬಗ್ಗೆ ಹೈಕೋರ್ಟ್ ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೇ ಇದ್ದರೂ, ಅರ್ಜಿದಾರ ಅಧಿಕಾರಿಯನ್ನು ದೀರ್ಘಾವಧಿಯವರೆಗೆ ಅಕಾರಣವಾಗಿ ಅಮಾನತಿನಲ್ಲಿಡದೇ ಇಲಾಖಾ ವಿಚಾರಣೆ ನಡೆಸಬೇಕು. ಈ ಹಿನ್ನೆಲೆಯಲ್ಲಿ ಅರ್ಜಿದಾರರು ಅಮಾನತು ರದ್ದುಪಡಿಸುವಂತೆ ಹೊಸ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿದೆ ಎಂದು ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ಅಮಾನತು ಶಿಕ್ಷೆ ರದ್ದುಪಡಿಸುವಂತೆ ಮೂರ್ತಿ ಹೋರಾಟ ಆರಂಭಿಸಿದ್ದು, ಮರು ನೇಮಕಕ್ಕಾಗಿ ವಿಧಾನ ಮಂಡಲದ ವಿಶೇಷ ಮಂಡಳಿ ಮೊರೆ ಹೋಗಿದ್ದಾರೆ.

ಸರಕಾರಿ ಅಧಿಕಾರಿಗಳ ಸೇವಾ ನಿಯಮ 10ರ ಪ್ರಕಾರ ಅಮಾನತು ಅವಧಿಗೆ ಮಿತಿ ಇದೆ. ಅಮಾನತುಗೊಂಡ ಅಧಿಕಾರಿಯ ವಿರುದ್ಧದ ತನಿಖೆ ಅಮಾನತುಗೊಂಡ ದಿನದಿಂದ 6 ತಿಂಗಳೊಳಗಾಗಿ ಪೂರ್ಣಗೊಳ್ಳದೇ ಇದ್ದಲ್ಲಿ, ಅಥವಾ ಮೂರು ತಿಂಗಳೊಳಗಾಗಿ ಇಲಾಖಾ ವಿಚಾರಣೆ ಆರಂಭವಾಗದೇ ಇದ್ದಲ್ಲಿ ಅಥವಾ ವರ್ಷದೊಳಗಾಗಿ ತನಿಖೆ ಪೂರ್ಣಗೊಳ್ಳದೇ ಇದ್ದಲ್ಲಿ ಪುನರ್ ನೇಮಕಕ್ಕೆ ಅವಕಾಶವಿದೆ ಎಂದು ನೇಮಕ ಪ್ರಾಧಿಕಾರಗಳಿಗೆ ಈಗಾಗಲೇ ನ್ಯಾಯಾಲಯ ಸೂಚನೆ ನೀಡಿದೆ. ಸಾಮಾನ್ಯವಾಗಿ ಇದೇ ನಿಯಮವನ್ನು ಅಮಾನತುಗೊಂಡ ಎಲ್ಲ ಅಧಿಕಾರಿಗಳ ಮರು ನೇಮಕ ವಿಚಾರದಲ್ಲಿ ಪರಿಗಣಿಸುತ್ತಾರೆ. ಹೀಗಾಗಿ ತಮ್ಮ ವಿಚಾರದಲ್ಲೂ ಇದೇ ನಿಯಮ ಪಾಲಿಸಬೇಕೆಂದು ಮೂರ್ತಿ ವಿಶೇಷ ಮಂಡಳಿಗೆ ಮನವಿ ಮಾಡಿದ್ದಾರೆ. ಜತೆಗೆ ತಮ್ಮ ಮೇಲೆ ನಡೆದ ಎಸಿಬಿ ದಾಳಿ ಸಂದರ್ಭದಲ್ಲಿ ಆದಾಯಕ್ಕೆ ಮೀರಿದ ಸ್ಥಿರ, ಚರ ಆಸ್ತಿ ಇಲ್ಲದಿರುವುದು ಖಾತ್ರಿಯಾಗಿದ್ದು, ಸಚಿವಾಲಯಕ್ಕೆ ವಾರ್ಷಿಕ ಆಸ್ತಿ ಮತ್ತು ಹೊಣೆಗಾರಿಕೆ ವಿವರ ನೀಡಿದ್ದೇನೆ ಎಂಬ ವಾದ ಮುಂದಿಟ್ಟಿದ್ದಾರೆ.

**ಮೂರ್ತಿ ವಾದವೇನು?**

ತಮ್ಮನ್ನು ಕಾರ್ಯದರ್ಶಿ ಸ್ಥಾನದಲ್ಲಿ ಮತ್ತೆ ನಿಯೋಜಿಸುವಂತೆ ವಿಧಾನಸಭೆಯ ವಿಶೇಷ ಮಂಡಳಿಗೆ ಈಗಾಗಲೇ ಎರಡು ಬಾರಿ ಮನವಿ ಮಾಡಿರುವ ಮೂರ್ತಿ ಇದಕ್ಕಾಗಿ ಸೇವಾ ನಿಯಮದಲ್ಲಿರುವ ಅವಕಾಶಗಳ ಜತೆಗೆ ಕೆಲ ತಾರ್ಕಿಕ ಕಾರಣಗಳನ್ನು ಮುಂದಿಟ್ಟಿದ್ದಾರೆ. 'ನನ್ನನ್ನು ಕಾರ್ಯದರ್ಶಿ ಸ್ಥಾನದಿಂದ ಅಮಾನತುಗೊಳಿಸುವುದಕ್ಕೆ ನೀಡಿರುವ ಕಾರಣ 'ಕರ್ತವ್ಯ ಲೋಪ'. ನನ್ನ ವಿರುದ್ಧ ಭ್ರಷ್ಟಾಚಾರ ಅಥವಾ ಲಂಚ ಪಡೆದ ಆರೋಪವಿಲ್ಲ. ಬೆಳಗಾವಿ ಅಧಿವೇಶನ ನಡೆಸುವುದಕ್ಕೆ ಮಾಜಿ ಸ್ಪೀಕರ್ ಕೋಳಿವಾಡ ಅವಧಿಯಲ್ಲಿ ಕೋಟ್ಯಂತರ ರೂ. ಖರ್ಚಾಗಿದೆ. ಸ್ಪೀಕರ್‌ಗೆ ಸರಿಯಾಗಿ ಮಾರ್ಗದರ್ಶನ ಮಾಡದೆ ಅಪವ್ಯಯಕ್ಕೆ ಕಾರಣರಾಗಿದ್ದೀರಿ ಎಂದು ಆರೋಪಿಸಲಾಗಿದೆ. ಆದರೆ ಈ ಆರೋಪ ಮಾಡಿದ್ದು ಮಾಜಿ ಸ್ಪೀಕರ್ ಕೋಳಿವಾಡ ಅಲ್ಲ, ರಮೇಶ್ ಕುಮಾರ್ ಸ್ಪೀಕರ್ ಆಗಿದ್ದ ಅವಧಿಯಲ್ಲಿ ಈ ಆರೋಪದ ಮೇಲೆ ನನ್ನನ್ನು ಅಮಾನತುಗೊಳಿಸಿದ್ದಾರೆ. ಆದರೆ ಶಾಸನ ಸಭೆಯ ನಿಯಮ ಪ್ರಕಾರ ಕಾರ್ಯದರ್ಶಿಗೆ ಶಾಸನಸಭೆ ಹಾಗೂ ಸಭಾಧ್ಯಕ್ಷರ ಆದೇಶವನ್ನು ಜಾರಿ ಮಾಡುವ ಅಧಿಕಾರ ಇದೆಯೇ ಹೊರತು 1 ರೂ. ಮಂಜೂರು ಮಾಡುವ ಆರ್ಥಿಕ ಅಧಿಕಾರವಿಲ್ಲ. ನಾನು ಮಾಡದ ತಪ್ಪಿಗೆ ಅಮಾನತು ಶಿಕ್ಷೆ ನೀಡಲಾಗಿದೆ. ಸೇವಾ ನಿಯಮ ಪ್ರಕಾರ ಸರಕಾರಿ ಅಧಿಕಾರಿ ಅಮಾನತುಗೊಂಡಾಗ ಆತನಿಗೆ ಮೊದಲ 6 ತಿಂಗಳು ಅರ್ಧ ಸಂಬಳ, ನಂತರ ಶೇ.75ರಷ್ಟು ಸಂಬಳ ನೀಡಬೇಕಾಗುತ್ತದೆ. ಕಳೆದ ಸೆಪ್ಟೆಂಬರ್‌ನಿಂದ ನನಗೆ ವೇತನವನ್ನೇ ನೀಡದೇ ವೇತನ ಖಾತೆ